# ಒಂದು ಮುಟ್ಟಿನ ಕಥೆ




## ರಾಜೀವ ನಾರಾಯಣ ನಾಯಕ

ಕಲೆ: ಎಸ್.ವಿ. ಹೂಗಾರ್


ಶ್ಶಶ್ಯೀ, ಅದು ಒಂದು ಮುತ್ತಿನ ಕಥೆ ಆಗಬೇಕಿತ್ತು, ಶೀರ್ಷಿಕೆನೇ ತಪ್ಪಾಗಿ ಅಚ್ಚಾಗಿದೆ ಅಂದ್ಕೊಂಡ್ರಾ? ಮುದ್ರಾ ರಾಕ್ಷಸನಿಂದ ಎಂಥ ಎಡವಟ್ಟಾಗಿದೆ ಅಂತ ಮುಸಿಮುಸಿ ನಗ್ತಿದ್ದೀರಾ? ಅಥವಾ ಹದಿಹರೆಯದವರ ಕಣ್ಣಿಗೆ ಬೀಳದಂತೆ ಪತ್ರಿಕೆಯನ್ನು ಎತ್ತಿಡುತ್ತಿದ್ದೀರಾ? ಅರರೆ, ಒಂದ್ನಿಮಿಷ! ಯಾವುದಕ್ಕೂ ಕಥೆಯನ್ನೊಮ್ಮೆ ಓದಿ ನೋಡಿ. ವಿಷಯವನ್ನು ಸರಿಯಾಗಿ ತಿಳ್ಕೊಳ್ಳಿ. ಮನೆ ಮಕ್ಕಳಿಗೂ ಓದೋಕೆ ಹೇಳಿ. ಹೇಗೂ ಅವ್ರಿಗೂ ಕಥೆ ಅಂದ್ರೆ ಇಷ್ಟ ಅಲ್ವಾ, ನಮ್ಮ ಸುಮಿಯ ಹಾಗೆ!

ಸುಮಿ ಕನ್ನಡ ಏಳನೇ ತರಗತಿಯಲ್ಲಿ ಓದುವ ಚೂಟಿಯಾದ ಹುಡುಗಿ. ಅವಳ ಬೊಗಸೆ ಕಣ್ಣುಗಳು, ಸೊಂಪಾದ ಕೂದಲು, ಪುಟಿಯುವ ಉತ್ಸಾಹದಿಂದಾಗಿ ಸುಮಿಯೆಂದರೆ ಎಲ್ಲರಿಗೂ ಪ್ರೀತಿನೇ. ಅವಳಿಗೊಬ್ಬ ಮೂರು ವರ್ಷದ ಕೀಟಲೆ ತಮ್ಮನಿರುವನು. ಅಕ್ಕನ ಆಟಿಕೆಗಳನ್ನು ಮುರಿಯುವುದು, ಅವಳ ಪುಸ್ತಕದ ಹಾಳೆಗಳನ್ನು ಹರಿಯುವುದು, ಅವಳಿಲ್ಲದಿದ್ದಾಗ ಬಣ್ಣದ ಕಡು ತೆಗೆದು ಗೋಡೆ ಮೇಲೆ ಗೀಚುವುದು ಮಾಡುತ್ತಿದ್ದ. ಆದರೂ ಅವನಿಗೆ ಯಾರೂ ಬೈಯ್ಯುತ್ತಿರಲಿಲ್ಲ. ತಮ್ಮ ಹುಟ್ಟಿದ ಮೇಲೆ ಅಮ್ಮ ತನ್ನನ್ನು ಅಷ್ಟಾಗಿ ಪ್ರೀತಿಸುವುದಿಲ್ಲ ಎಂದು ಸುಮಿಗೆ ಬೇಜಾರು. ಅದನ್ನು ಸಿಟ್ಟಿನಲ್ಲಿ ಅಮ್ಮನಿಗೆ ಹೇಳಿಯೂ ಆಗಿದೆ. 'ಹೌದೌದು...ನೀನು ನನ್ನ ಸವತಿ ಮಗಳಲ್ವಾ!' ಎಂದು ಅಮ್ಮ ನಿರ್ಲಕ್ಷಿಸುವುದುಂಟು. ಎಷ್ಟೋ ಸಾರಿ ಈ ಅಮ್ಮ ಆಡುವುದು ನೋಡಿದರೆ ನಿಜಕ್ಕೂ ಆಕೆ ಮಲತಾಯಿನೇ ಇರಬಹುದು ಅನಿಸುತ್ತಿತ್ತು. ಅಪ್ಪ ತುಂಬಾ ಅಕ್ಕರೆ ತೋರಿಸುತ್ತಾರಾದರೂ, ಚಂದ ಚಂದದ ಕಥೆ ಹೇಳುತ್ತಾರಾದರೂ ಅವರು ಮನೆಯಿಂದ ಹೊರಗಿರುವುದೇ ಜಾಸ್ತಿಯಾಗಿತ್ತು. ಆದರೆ ಬರುವಾಗ ಅವರು ತಪ್ಪದೇ ಕಥೆ ಪುಸ್ತಕಗಳನ್ನು ತರುತ್ತಿದ್ದರು. ಹೀಗಾಗಿ ಮನೆಯಲ್ಲಿದ್ದಾಗ ಸುಮಿ ಅಟ್ಟ ಹತ್ತಿ ಪುಸ್ತಕ ಓದುತ್ತಾ ಕೂತು ಬಿಡುವಳು. ಅವಳಿಗೆ ಓದುವುದೆಂದರೆ ತುಂಬಾನೆ ಇಷ್ಟ. ಕೈಗೆ ಸಿಕ್ಕಿದ್ದನ್ನೆಲ್ಲಾ ಓದುವಳು. ಅದರಲ್ಲೂ ಅವಳಿಗೆ ಕಥೆಗಳೆಂದರೆ ಪ್ರಾಣ!

ಒಂದು ದಿನ ಮನೆಗೆ ಅಚಾನಕ್ಕಾಗಿ ನೆಂಟರು ಬಂದಾಗ, ಚಹಾ ಮಾಡಲು ಹೋದ ಸುಮಿಯ ಅಮ್ಮ ಸಕ್ಕರೆ ಖಾಲಿಯಾಗಿರುವುದನ್ನು ಕಂಡು, ಅಂಗಡಿಯಿಂದ ಬೇಗ ಹೋಗಿ ಅರ್ಧಕಿಲೋ ಸಕ್ಕರೆ ತಗೊಂಬಾ ಎಂದು ಹಿಂಬಾಗಿಲಿನಿಂದ ಅಟ್ಟಿದಳು. ಶಾಲೆಗೆ ಹೋಗಲು ತಯಾರಾಗಿದ್ದ ಸುಮಿ, ಸ್ಕೂಲಿಗೆ ಲೇಟ್ ಆಗುತ್ತಮ್ಮಾ ಎಂದರೂ ಅಮ್ಮ 'ಬೇಗ ನಡಿಯೇ, ಕೋತಿ' ಎಂದು ಕಣ್ಣುಬಿಟ್ಟಳು. ಮೊದಲೇ ಅಂಗಡಿ ಶೆಟ್ಟರೆಂದರೆ ಸುಮಿಗೆ ಇಷ್ಟವಾಗೋದಿಲ್ಲ. ಸುಮ್ಮನೇ ಕೆನ್ನೆ ಹಿಂಡುತ್ತಾರೆ. ಅರ್ಥವಾಗದ ಮಾತು ಹೇಳಿ ನಗ್ತಾರೆ... ಶೆಟ್ಟರ ಅಂಗಡಿ ಇರುವುದೂ ದೂರದ ಮುಖ್ಯರಸ್ತೆಯಲ್ಲಿ. ಉಪಾಯವಿಲ್ಲದೇ ಅಲ್ಲಿವರೆಗೂ ಓಡ್ತಾ ಓಡ್ತಾ ಹೋದಳು. ಶೆಟ್ಟರು ಕಾಗದವನ್ನು ಕೋನ್ ಆಕಾರದಲ್ಲಿ ಸುತ್ತಿ, ಅದರಲ್ಲಿ ಸಕ್ಕರೆ ಸುರಿದು ಕಟ್ಟಿ, ಜೋಪಾನವಾಗಿ ತಗೊಂಡೋಗವ್ವ ಎಂದರು. ಸುಮಿ ಸಕ್ಕರೆ ಪೊಟ್ಟಣವನ್ನು ಎರಡೂ ಕೈಲಿ ಹಿಡಿದು ಅವಸರದಿಂದ ನಡೆದಳು. ಸಕ್ಕರೆ ಸುತ್ತಿದ ಕಾಗದವು ಯಾವುದೋ ಹಳೆಯ ಪತ್ರಿಕೆಯದಾಗಿತ್ತು. ಅದರಲ್ಲಿ 'ಒಂದಾನೊಂದು ಕಾಲದಲ್ಲಿ ಒಬ್ಬಳು ಚೆಲುವೆ ರಾಜಕುಮಾರಿ ಇದ್ದಳು' ಎನ್ನುವ ವಾಕ್ಯ ಸುಮಿಯ ಕಣ್ಣಿಗೆ ಬಿತ್ತು. ಅರೆ! ಇಲ್ಲೊಂದು ಕಥೆಯಿದೆ! 'ಆ ರಾಜಕುಮಾರಿ ಏಳು ಮಲ್ಲಿಗೆ ತೂಕದವಳು. ಅವಳಂಥ ಸುಂದರಿ